<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಭ್ರಷ್ಟಾಚಾರ ನಿಗ್ರಹ ಪ್ರಕರಣಗಳ ಅಧಿವಿಚಾರಣ ವಿಶೇಷ ನ್ಯಾಯಾಲಯ, ಕೋಲಾರ</u>

**Spl. C. (P.C.) 09/2014**

ಫ್ರಾಸಾಃ **16** ಚಾಸಾಃ **50**
ದಿನಾಂಕಃ **09-04-2026**

| | |
|---|---|
| ಹೆಸರು | :: ನಾರಾಯಣಮ್ಮ |
| ಗಂಡನ ಹೆಸರು | :: ನಾರಾಯಣಸ್ವಾಮಿ |
| ವಯಸ್ಸು | :: 54 ವರ್ಷ |
| ಉದ್ಯೋಗ | :: ಅಡುಗೆ ಸಹಾಯಕರು |
| ವಾಸ ಸ್ಥಳ | :: ಚಿಲುಪನಹಳ್ಳಿ, ಕೋಲಾರ ತಾಲ್ಲೂಕು |

<u>ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಗಕರಿಂದಃ</u>

1. ನಾನು 1998 ರಿಂದ ವೇಮಗಲ್ ನಲ್ಲಿನ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ಅಡುಗೆ ಸಹಾಯಕಳಾಗಿ ಸೇವೆ ಸಲ್ಲಿಸುತ್ತಿದ್ದೇನೆ. 2011-13 ನೇ ಸಾಲಿನಲ್ಲಿ ಆ ಹಾಸ್ಟೆಲ್ ನಲ್ಲಿ ನಾನು ಅಡುಗೆ ಸಹಾಯಕಳಾಗಿ ಮತ್ತು ಶಿವಣ್ಣ, ನಾಗರಾಜಪ್ಪ, ಶ್ರೀನಿವಾಸ್ ಅಡುಗೆಯವರಾಗಿ ಕೆಲಸ ಮಾಡುತ್ತಿದ್ದೆವು. ನಮ್ಮ ತಿಂಗಳ ಸಂಬಳ ಆಗ ರೂ.6,900/- ಇತ್ತು ಮತ್ತು ಅದನ್ನು ಚೆಕ್ ಮೂಲಕ ನಮಗೆ ಕೊಡುತ್ತಿದ್ದರು.

2. ದಿನಾಂಕ 02.02.2013 ರಂದು ಲೋಕಾಯುಕ್ತ ಕಛೇರಿಗೆ ತನಿಖಾಧಿಕಾರಿ ಕರೆಸಿದ್ದರು. ಆಗ ಒಂದು ಬಿಲ್ ದಾಖಲೆಯನ್ನು ತೋರಿಸಿ ನಿಮ್ಮ ಸಹಿ ಇದೆಯೇ ಎಂದು ಕೇಳಿದರು. ಈಗ ತೋರಿಸಿದ ದಾಖಲೆಯನ್ನೇ ತನಿಖಾಧಿಕಾರಿಯವರು ಆ ದಿನ ನನಗೆ ತೋರಿಸಿದ್ದಾರೆ. ಸಾಕ್ಷಿಗೆ ತೋರಿಸಿದ ದಾಖಲೆ ನಿ ಪಿ 515 ರ ಹಣ ಸಂದಾಯ ರಸೀದಿ ಎಂಬ ದಾಖಲೆ ಇದೆ. ಅದನ್ನು ನಿ ಪಿ 515(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ನನ್ನ ಸಹಿ ಇಲ್ಲ. ಅದರಲ್ಲಿರುವ ನಾರಾಯಣಮ್ಮ ಎಂಬ ಹೆಸರಿನ ಮುಂದೆ ಇರುವ ಸಹಿ ನನ್ನದಲ್ಲ. ಅದರಲ್ಲಿ ಇರುವ ಕಾಂತರಾಜು, ಮುನಿನಾರಾಯಣಮ್ಮ, ರಾಮಪ್ಪ, ಶ್ರೀರಾಮ ಮತ್ತು ಮುನಿಸ್ವಾಮಪ್ಪ ಇವರು ನಮ್ಮ ಹಾಸ್ಟೆಲ್ ನಲ್ಲಿ ಕೆಲಸ ಮಾಡಿಲ್ಲ ಮತ್ತು ಅವರು ಯಾರು ಎಂದು ನನಗೆ ಗೊತ್ತಿಲ್ಲ.

3. ತನಿಖಾಧಿಕಾರಿಯವರು ಲೋಕಾಯುಕ್ತ ಕಛೇರಿಯಲ್ಲಿ ಈಗ ತೋರಿಸಿದ ನಿ ಪಿ 272 ರಂತೆ ನನ್ನ ಸಹಿಗಳನ್ನು ಮತ್ತು ನಿ ಪಿ 273 ರಂತೆ ನನ್ನ ಬರವಣಿಗೆಗಳನ್ನು ಪಡೆದಿದ್ದಾರೆ. ಆ ಸಮಯದಲ್ಲಿ ಈಗ ತೋರಿಸಿದ ನಿ ಪಿ 277 ರಂತೆ ಮಹಜರು ಮಾಡಿದ್ದಾರೆ. ನಿ ಪಿ 277 ರಲ್ಲಿನ ಸಾಕ್ಷಿದಾರರ ಸಹಿಯನ್ನು ನಿ ಪಿ 277(ಡಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಂ.ಹೆಚ್ ವಕೀಲರಿಂದಃ

4. ನನ್ನನ್ನು ಯಾವತ್ತೂ ಲೋಕಾಯುಕ್ತ ಕಛೇರಿಗೆ ತನಿಖಾಧಿಕಾರಿ ಕರೆಸಿಲ್ಲ ಮತ್ತು ಯಾವುದೇ ಬಿಲ್ಲನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮಾದರಿ ಬರವಣಿಗೆಗಳನ್ನು ಮತ್ತು ಸಹಿಗಳನ್ನು ಪಡೆದಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 277 ಕ್ಕೆ ಸಹಿ ಮಾಡುವಾಗ ನಿಮ್ಮ ಜೊತೆ ಬೇರೆ ಯಾರಾದರೂ ಸಹಿ ಮಾಡಿದ್ದಾರಾ ಎಂದರೆ ಇಲ್ಲ ಎನ್ನುತ್ತಾರೆ.

ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಪಿ.ಎನ್.ಕೆ ವಕೀಲರಿಂದಃ

5. ನನ್ನ ಸಂಬಳ ಚೆಕ್ ಮೂಲಕ ಸಮಾಜ ಕಲ್ಯಾಣ ಇಲಾಖೆಯಿಂದ ಆಗುತ್ತಿತ್ತು. ಸಾಕ್ಷಿದಾರರು ಮುಂದುವರೆದು 2-3 ತಿಂಗಳಿಗೆ ಒಂದು ಸಾರಿ ಸಂಬಳ ಮಾಡುತ್ತಿದ್ದರು ಎನ್ನುತ್ತಾರೆ. ಹಾಸ್ಟೆಲ್ ನಲ್ಲಿ ನೀವು ಯಾವುದೇ ಸಹಿಗಳನ್ನು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 5, 6 ಮತ್ತು 7 ನೇ ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಈ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ, ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.)

ಓ. ಹೇ. ಕೇ. ಸ. ಇದೆ,

(ವಿಜಯಕುಮಾರ್ ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ